Regd. No. M 1299 SATYAVADI

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 28] ಗುರುವಾರ 30—10—47 [ಬಿಡಿ ಪ್ರತಿ ಪೈ

ಏಕತಂತ್ರ ಕರ್ನಾಟಕ ಸಿದ್ಧರಾಗಿ

ನಿನ್ನೆ ಸಂಜೆ ಶ್ರೀ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ರಂಗಾಚಾರ್ಲು ಪುರ ಭವನದ ಪ್ರಾಕಾರದಲ್ಲಿ ಸೇರಿದ್ದ ಭಾರಿ ಸಭೆಯಲ್ಲಿ ತಾತ್ಕಾಲಿಕ ಮಂತ್ರಿಗಳು ಭಾಷಣ ಮಾಡಿದರು.

ಪ್ರಧಾನಿ ರೆಡ್ಡಿಯವರು ಕರ್ನಾಟಕ ವಿಕೇಂದ್ರೀಕರಣದ ಬಗೆಗೆ ಕಾರ್ಯೋನ್ಮುಖರಾಗುವ ಕಾಲವಿದೀಗ ಬಂದಿದೆ ಎಂದು ಹೇಳಿದರು.

ಉಳಿದ ಮಂತ್ರಿಗಳು ಈ ನೂತನ ಸರಕಾರಕ್ಕೆ ಸಂಪೂರ್ಣ ಬೆಂಬಲವೀಯುವೆಂದು ಪ್ರಾರ್ಥಿಸಿದರು.

ಬಂಡವಾಳಗಾರರ ಜಲಗೆ ಬೀಳಲಿಲ್ಲ

ಆರ್ಕಾಟು ರಾಮಸ್ವಾಮಿಯವರ ಪ್ರಜ್ಞೋತ್ಸವ ನಿಧಿ ಕೂಡಿಸಲು ಸಹಕರಿಸಿದ ಬೊಗಳೂರಿನ ಸುಪ್ರಸಿದ್ಧ ಬಂಡವಾಳಗಾರರಾದ ಶ್ರೀ ದೇವರಾಜ ಶಿವ ಶಾಂಭವರು ನೂತನ ಮಂತ್ರಿಗಳಿಗೆ ಸತ್ಕಾರಾಹ್ವಾನವನ್ನು ಕೊಟ್ಟಿದ್ದನ್ನು ಕಾಂಗ್ರೆಸ್ ಮಂತ್ರಿಗಳೊಡನೆ ಕಾಂಗ್ರೆಸ್ಸೇತರ ಮಂತ್ರಿಗಳೂ ಅಲಕ್ಷಿಸಿದಂದ ತೀವ್ರವಿಷಾದಪಟ್ಟರು ಎಂದು ತಿಳಿಯಬಂದಿದೆ. ತಂಬೂಡಿಟ್ಟರಆಹ್ವಾನವನ್ನೂ ಹೀಗೇ ತಿರಸ್ಕರಿಸಲಾಯಿತಂತೆ.

ಮುದ್ದಿಗಳು

ಮುಂದುವರಿಸಲ್ಪಟ್ಟ ರಾಜಧಾನಿಯ ಮಾನಿಸಿಪಲ್ ಮಿಂಟಂಗು ಶಾ | 31 ರಲ್ಲಿ ನಡೆತುವುದು.

ಂ ಂ

ಪಾದರಸದಿಂದ ಭಂಗಾರ ಮೆಂಬ ವಿಷಯ ಕುರಿತು ಮಧುಗಿರಿ ಹೈ ಸ್ಕೂಲಿನಲ್ಲಿ ವಿ ವಿ ಸ್ಯಜಾರೋಪನ್ಯಾಸವನ್ನು ತುಮಕೂರು ಇಂಟರ್ಮೀಡಿಯೆಟ್ ಕಾಲೇಜು ಲೆಕ್ಚರರ್ ಶ್ರೀ ಕೃಷ್ಣಸ್ವಾಮಿ ರಾಯರು ಮಾಡುವರು.

ಂ ಂ

ಕಾಶ್ಮೀರ ಪ್ರಕರಣದ ಬಗ್ಗೆ ತಮ್ಮೊಡನೆ ಮಾತನಾಡಿಲು ನೆಹರು ಮತ್ತು ಮೌಂಟುಬ್ಯಾಟನ್ನರನ್ನು ಜಿನ್ನರು ಕರೆದಿದ್ದರು. ಆದರೆ ಅವರು ಹೋಗಲಿಲ್ಲ

ಂ ಂ

ಎ ಐ ಸಿ ಸಿ ಮಿಂಟಂಗು ಚಿತ್ರದುರ್ಗದಲ್ಲಿ ವಿಜಯನಗರದಲ್ಲಿ ನವೆಂಬರು 15—16 ರಲ್ಲಿ ನಡೆಯುವುದು

ಂ ಂ

ಮಂಡ್ಯದ ಸಕ್ಕರೆ ಕಾರ್ಖಾನೆಯ 1400 ಮಂದಿ ಕೆಲಸಗಾರರು ಅಧಿಕಾರಿಗಳ ಅಸಮರ್ಪಕ ವ್ಯವಸ್ಥೆಗಾಗಿ ಉಪವಾಸ ಮಾಡುತ್ತಿದಾರೆ

ಂ ಂ

ನಿನ್ನೇ ದಿವಸ ಮಹಾರಾಜರು ವಿಶೇಷ ದರ್ಬಾರಿಗೆ ಕೆಲವು ಪತ್ರಿಕೆಯವರನ್ನು ಆಹ್ವಾನಿಸಿ ಉಳಿದವರನ್ನು ತಿರಸ್ಕರಿಸಿದ್ದನ್ನು ವಿಶ್ವಕರ್ನಾಟಕ ಖಂಡಿಸಿದೆ.

ಂ ಂ

ಈ ದಿವಸ ಮಧ್ಯಾಹ್ನ ಮಂತ್ರಿಗಳು ಇಂಟರ್ಮೀಡಿಯೆಟ್ ಕಾಲೇಜಿಗೆ ಭೇಟಿ ಕೊಟ್ಟರು ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನಕೊಡಬೇಕೆಂದು ಶ್ರೀ ರೆಡ್ಡಿಯವರು ತಿಳಿಸಿದರು ಶ್ರೀ ಜುನ್ಸಶೇಖರಣ್ಣನವರು ಖಾದಿ ಟೋಪಿ ಧರಿಸಿದ್ದರು.

ಸಕರೆ ಸಿಕ್ಕದ್ದೇ ಪೌರಸಭೆಯಲ್ಲಿ ಸತ್ಕಾರ

— ಆಕ್ಷೇಪಹಾರ —

ಇದು ಬಸಗಾನಪಲ್ಲಿ ಜಮೀಂದಾರಿಯಿಂದ ಬಂದಿರುವ ಸಮಾಚಾರ. ಶತಾನುಭೋಗ ಶೇಷಯ್ಯನೆಂಬಾತನ ಹೆಂಡತಿಯು ಸ್ಯಸವಿಸಿದ್ದರಿಂದ ಪಥ್ಯಕ್ಕಾಗಿ ಜರೂರಾಗಿ ಸಕ್ಕರೆ ಬೇಕಾಗಿದ್ದುದರಿಂದ ಅತನು ಆಹಾರ ಮುಖ್ಯಸ್ಥರನ್ನು ಕಂಡು ತನ್ನ ವಿಚಾರವನ್ನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಂಡನು.

ಕರ್ಕಶಹೃದಯನಾದ ಅಧಿಕಾರಿಯು ಗರ್ವದೊಡನೆ ಶಾನುಭೋಗನನ್ನು ಬಾಯಿಗೆ ಬಂದಂತೆ ಬೈದು ' ಸಕ್ಕರೆಗೆ ಗತಿಯಿಲ್ಲದವನು ಏಕೆ ಹೆಂಡತಿಯ ಸಹವಾಸ ಮಾಡಿ ಮಕ್ಕಳನ್ನು ಹುಟ್ಟಿಸುತ್ತಿರುವೆ ? ' ಎಂದು ದೊಡ್ಡ ಮನುಷ್ಯರ ಎದುರಿನಲ್ಲಿ ಪೂಸಿಸಿದನಂತೆ. ಶೇಷಯ್ಯನು ಎದುರಿಸಿ ಮಾತನಾಡಲು ಧೈರ್ಯಸಾಲದೆ ಒಳಗೊಳಗೆ ನ್ಯಸನ ಪಡುತ್ತಾ ಅಲ್ಲಿಂದ ಹೊರಟು ತಾಲ್ಲೋಕು ಆಫೀಸಿನ ಗುಮಾಸ್ತರಿಗೆ ವಿಷಯವನ್ನೆಲಾ ತಿಳಿಸಿ ಹಸುಬುಗುವಿನಂತೆ ಅತ್ತನಂತೆ. ಪಾಪ ಆ ಗುಮಾಸ್ತರು ಏನು ಮಾಡಬಲ್ಲರು ? ಸಮಾಧಾನ ಉಂಟಾಗುವಂತೆ ಎಷ್ಟು ಹೇಳಿದರೂ ಅತನಿಗೆ ಆ ಮಾತಿನ ಮರ್ಮವನ್ನು ಸಹಿಸಕೊಳ್ಳಲಾಗಲಿಲ್ಲ.

ಮನಸಿಗೆ ಹೋಗುತ್ತಲೂ ಅತನ ಆಗ ಮನವನ್ನೇ ನೀಕ್ಸಿಸುತ್ತಿದ್ದ ಅತನ ಹೆಂಡತಿಯು ' ಔಷಧಿಗೆ ಸಕ್ಕರೆ ತಂದಿರಾ ' ಎಂದು ಅತುರದಿಂದ ಪ್ರಶ್ನಿಸಲು, ನಡೆದ ಅವಮಾನವನ್ನು ಆಕೆಯೊಂದಿಗೆ ಹೇಳಿಕೊಳ್ಳಲಾರದೆ ತಲೆ ಬಗ್ಗಿಸಿಕೊಂಡು ಕೂತುಕೊಂಡನಂತೆ. ನಿರಾಶಾಜನಕವಾದ ವಿಚಾರವನ್ನು ಮನಸ್ಸಿನಲ್ಲಿಯೇ ಇಟ್ಟುಕೊಳ್ಳಲಾರದೆ ' ಒಂದು ಹಿಡಿ ಸಕ್ಕರೆಯನ್ನು ಸಂಪಾದಿಸಿಕೊಳ್ಳಲಾರದ ಶಾನುಭೋಗಿಕೆ ಏಕೆ ? ' ಎಂದು ಹೇಳಿದಳಂತೆ. ಅದರಿಂದ ಉದ್ರಿಕ್ತನಾಗಿ ಹೆಂಡತಿಯನ್ನು ಜೈದುಹೊಡೆದನಂತೆ.

ಅಧಿಕಾರಿಯಿಂದ ತನ ಅವಮಾನಕ್ಕೆ ಆಗಲೆ ಜೀವಚ್ಛವವಾಗಿದ್ದ ಅತನು ಭಗ್ನಹೃದಯನಾಗಿ ಜೀವನದಲ್ಲಿ ವಿರಕ್ತಿ ಹೊಂದಿ, ಮನೆಯಲ್ಲಿ ಎಲ್ಲರೂ ನಿದ್ದೆ ಹೋದ ತರುವಾಯ ತಲೆಬಾಗಿಲ ಹಿಂಭಾಗಕ್ಕೆ ಹೋಗಿ ಹಗ್ಗವನ್ನು ನಿಲ್ಲಿಸಿ ಅದರ ಮೇಲೆ ಹತ್ತಿ ಹಗ್ಗವನ್ನು ಮತಾಳಿಗೆಯ ಸರಕ್ಕೆ ಬಿಗಿದು, ಕಂಠಕ್ಕೆ ನೇಣುಹಾಕಿಕೊಂಡು ಹಿಪ್ಪೆಯಿಂದ ಕೆಳಕ್ಕೆ ನೆಗೆದನಂತೆ. ನೆಲಕ್ಕೆ ಎರಡು ಅಲಗಳ ಮೇಲೆ ನೇತಾಡುತ್ತಾ ಸತ್ತುಹೋದನಂತೆ.

ಪಾಪ, ನಿರ್ಭಾಗ್ಯನಾದ ಶಾನುಭೋಗನ ಹೆಂಡತಿ ಮಕ್ಕಳು ಅನಾಥರಾದರು ನೋಡಿ. ಅಹಾರ ಹಂಚಿಕೆಯ ಅಧಿಕಾರಿಯು ತನ್ನ ಅಧಿಕಾರವನ್ನು ದುರುಪಯೋಗಿಸಿದ್ದರಿಂದ ಅಸಹ್ಯನಾಗಿ ವರ್ತಿಸಿದ್ದರಿಂದ ವ್ಯಾಪ್ತವಾಗಿರುವ ಹಾನಿಯು ! ಅಧಿಕಾರಿಗಳು ಸಾವಧಿಕ ಪ್ರವರ್ತನೆಯುಳ್ಳವರಾಗಬೇಕು. ಜನರನ್ನು ಅದರಿಂದ ಕಾಣಬೇಕು. ಜನದ ಬೆಲ್ಲೆಯೇ ತನ್ನ ಮೇಲ್ಲೆಯೆಂದೂ ತಾವು ಜನರ ಸೇವಕರೆಂದೂ ಅರಿತು ಕೆಲಸಮಾಡತಕ್ಕದ್ದು. (ಜಾಪ)

ಪೌರಸಭೆಯಲ್ಲಿ ಸತ್ಕಾರ

ನಿನ್ನೆ ಸಂಜೆ ಮೈಸೂರು ಪೌರ ಸಭೆಯವರು ನೂತನ ಮಂತ್ರಿಗಳಿಗೆ ಸತ್ಕಾರ ಕೂಟವೇರ್ಪಡಿಸಿದ್ದರು. ಅನೇಕ ಗಣ್ಯ ವ್ಯಕ್ತಿಗಳು ಆಹ್ವಾನಿಸಲ್ಪಟ್ಟಿದ್ದರು.

ಪೌರಸಭಾಧ್ಯಕ್ಷ ಶ್ರೀ ಹಿರಣ್ಣಯ್ಯನವರು ಸೂತನ ಮಂತ್ರಿಗಳಿಗೆ ಸುಸ್ವಾಗತವನ್ನು ಕೋರಿದರು.

ಪೌರಸಭೆಯು ಕಾಂಗ್ರೆಸ್ ವಕ್ಷದ ಪರವಾಗಿ ಶ್ರೀ ಮರಿಯಪ್ಪನವರು ಭಾಷಣ ಮಾಡುತ್ತಾ, ಮೈಸೂರು ನಗರದ ಕಡೆ ಮಂತ್ರಿಮಂಡಲ ಪೂರ್ಣ ಗಮನ ವೀಯಬೇಕೆಂದು ತಿಳಿಸಿದರು

ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು, ಶ್ರೀಗಳಾದ ದಾಸಪ್ಪ ಮತ್ತು ಮರಿಯಪ್ಪನವರು ಮಂತ್ರಿಗಳಾದ ಬಗೆಗೆ ಮಾತನಾಡುತ್ತಾ, ಮೈಸೂರು ಪೌರ ಸಭೆಯು ಮುಂತ್ತಿ ತಯೂರಿಕ್ಷಾ ಕೇಂದ್ರವಾಗಲಿ ಎಂದು ತಿಳಿಸಿದರು.

ಶ್ರೀ ಕೆ. ಸಿ. ರೆಡ್ಡಿಯವರು, ಆಹಾರಾಭಾವ ಕಾಲದಲ್ಲಿ ಆದ್ದೂರಿ ಅನಾವಶ್ಯಕ ಆಡ್ಡಾನವೀಯುವುದನ್ನು ಅದಷ್ಟು ಕಡಮೆ ಮಾಡಬೇಕೆಂದೂ, ರಚನಾತ್ಮಕ ಕಡೆ ನಾವು ಗಮನವೀಯಬೇಕೆಂದೂ ತಿಳಿಸಿದರು

ಶ್ರೀ ಬಿ. ನಾರಾಯಣಸ್ವಾಮಿಗಳು ವಂದನಾರ್ಪಣೆ ಮಾಡಿದರು.

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಐ. ಡಿ. ವಿಟಮಿನ್ನುಗಳು ಮತ್ತು ಧೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು ಭಟ್ಟಿಇಳಿಸಿದ ರಕ್ತ ಮತ್ತು ಮೇಗುಮಜ್ಜೆ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ದಾನಿಕ್ ಔಷಧಿ ವಿಟೋಫೆರಿ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

" ವಿಟೋಫೆರಿ " ಜಾಯಿಲೆ ಒಡದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ

ಎಲ್ಲಾ ಪ್ರಮುಖ ಔಷಧವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೆರಣಿಗಳನ್ನು ತಟ್ಟುತ್ತಿರುವುದು ಕಂಡುಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಹೋರಿಧೆ ಹಾಗೆ ನಿಲ್ಲಿಸದಿದ್ದಲ್ಲಿ ಮುನಿಸಿಪಲ್ ಬೈಲಾ ರೀತ್ಯಾ ಕಾರ್ಯಕ್ರಮ ಗಳು ತೆಗೆದುಕೊಳ್ಳಲಾಗುತ್ತೆ.

ಎಸ್. ಎಸ್. ಹಿರಣ್ಣಯ್ಯ

ಪ್ರೆಸಿಡೆಂಟ್

ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯವಿದ್ದಾಗ್ಯೂ ಸಹಾ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಕ್ಲೋಸೆಟ್ ಕಕ್ಕಸ್ಸುಗಳು ಕಟ್ಟಿಸಿರದಿರುವುದಿಲ್ಲ ಮನೆ ಮಾಲೀಕರುಗಳು ಕೂಡಲೆ ಡ್ರೈನೇಜು ಸೌಲಭ್ಯವಿರುವ ಜರಂಡಿಗಳಲ್ಲಿ ಫ್ಲಷಿಂಗ್ ಕಕ್ಕಸ್ಸುಗಳನ್ನು ಮಗ್ಗೆರೆ ಕಟ್ಟಿಸಬೇಕಾಗಿ ಕೋರಿದೆ. ತಪ್ಪಿದರೆ ಕಾನೂನು ರೀತ್ಯಾ ಸೂಕ್ತವಾದ ಕಾರ್ಯಕ್ರಮ ನಡೆಸಲಾಗುತ್ತೆ.

ಎಸ್. ಎಸ್. ಹಿರಣ್ಣಯ್ಯ

ಪ್ರೆಸಿಡೆಂಟ್

ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

Office of the Municipal Engineer
City Municipal Council
Mysore, dated 11-10-47

NOTIFICATION

Sealed tenders will be received up to 4 p.m. on 3rd November 1947 by the Municipal Engineer for Constructing a Slab drain in Sri Venkataramanaswamy Temple, Krishnaraja Mohalla.

Each tender must be accompanied with a challan for having remitted Rs. 170 in the Municipal Treasury as earnest money.

For full particulars please see the detailed notification on the notice Board.

S, NARAYANASWAMY
Municipal Engineer

ಶ್ರೀ 'ಓಂ' ಗುರುತಿನ

ಆರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೆಸರಿ ಗಿಡಗಳಿಂದ ಆರಿಸಲ್ಪಟ್ಟ ಹೂವಿನಿಂದ ಶೇಕ್ಡಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ರಂಗು ಆಕ್ಷೇಪಣೀಯ ಪದಾರ್ಥಗಳು ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾಗಿದೆ. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ವಿವಾಹಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡುತ್ತಿದ್ದಾಗಿದೆ. ಎಂದು ತಿಳಿಸಲಾಗಿದೆ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

At Opera Woodlands

2nd Glorious Week From 31-10-47

MAD-MAN

.... with —

N.S.Krishnan, T A Madurau

ಅಶೋಕಕುಮಾರ್

ವೀರಾ, ಪ್ಯಾರೊ, ಪಾಶ್ಚಪ್ಪಟಿರುವ

ಪ್ರಕಾರಿ

(ಅವೇಕಫ ಹಿಂದಿ ಚಿತ್ರ)

ಪ್ರತಿದಿನ 3 ಆಟ

Edited, Printed and Published by M. S Krishna Rao at the Satyavadi Press Chamarja Agrahar Mysore.